

ಪಿ.ಎಂ.ಶ್ರವಣ, ತಾಳಗುಪ್ಪ

# ಮಳೆಯ ಹಿಗ್ಗು

ಮಳೆ... ಅದೊಂದು ಧ್ಯಾನ. ಹಿಗ್ಗು. ಹಿತ. ಚೆಲುವು. ಮಳೆಯನ್ನು ಪ್ರೀತಿಸದೇ ಇರುವುದು ಸಾಧ್ಯವಾಗದ ಮಾತು. ಮಳೆಗೆ ಮುಖ ಕೊಟ್ಟು ಮುದ್ದಿಸಿಕೊಳ್ಳುವ ಹಂಬಲಕ್ಕೆ ವಯಸ್ಸಿನ ಹಂಗಿಲ್ಲ. ಮತ್ತೆ ಮತ್ತೆ ಮಕ್ಕಳಾಗುವ ಪ್ರಯತ್ನಕ್ಕೆ ಮಳೆ ಇಂಬು ನೀಡುತ್ತದೆ. ಬಾಲ್ಯದ ನೆನಪುಗಳಿಗೆ ರೆಕ್ಕೆ ಮೂಡಿಸುತ್ತದೆ. ಮಳೆ ಕುರಿತು ಏನೇನೋ ನಂಬಿಕೆಗಳು. ಪ್ರತಿ ಮಳೆಯೂ ಹೊಸತು ಎಂಬಂಥ ಅನುಭೂತಿ.

ಮುಂಗಾರಿನ ಹನಿಗೆ ಮಣ್ಣು ಅರಳುತ್ತದೆ. ಕನಸು ಕಣ್ಣಲ್ಲಿ ಮಿಂಚು ಹೊಳೆಯುತ್ತದೆ. ಒಂದು ಹದ ಬಿದ್ದ ಮಳೆಗೆ ಹಿತ್ತಲಿನ ಬರಡಲ್ಲಿ ಹಸಿರುಕ್ಕಿಸುವ ಶಕ್ತಿ ಇದೆ. ಮುಗಿಲಿಂದ ಹರಿದು ಬರುವ ಮಿಂಚು ಎಂತೆಂಥ ನೋವುಗಳನ್ನೋ ಸುಟ್ಟುಬಿಡಬಲ್ಲದು. ನೆಟ್ಟ ಬೀಜ ಮೊಳಕೆಯ ವಂಕಿತಲೆ ತೋರಿದರೆ ಏನೋ ಸಂತಸ. ಈ ಸಂತಸಕ್ಕೆ ಕಾರಣವಾಗುವ ಮಳೆ ಧ್ಯಾನದ ಸಂಚಿಕೆಯಿದು.

ಅಂತರರಾಷ್ಟ್ರೀಯ ಖ್ಯಾತಿಯ ಭಾಷಾ ವಿಜ್ಞಾನಿ ಪ್ರೊ.ಎಸ್.ಎನ್. ಶ್ರೀಧರ್ ಅವರ ಸಂದರ್ಶನ ಈ ಸಂಚಿಕೆಯ ವಿಶೇಷ. ಕಿರಾಣಾ ಘರಾಣೆಯ ನಾಲ್ಕನೆಯ ತಲೆಮಾರಿನ ಕೊಂಡಿಯಂತಿದ್ದ ಮಾಧವ ಗುಡಿ, ಅದ್ವಿತೀಯ ಕಲಾವಿದ ಶಂಕರಗೌಡ ಬೆಟ್ಟದೂರು ಕುರಿತು ಬರಹಗಳಿವೆ. ರವಿಕುಮಾರ ಕಾಶಿ ಅವರ 'ಅನುಕ್ತ' ಅಂಕಣ ಈ ಸಂಚಿಕೆಯೊಂದಿಗೆ ಮುಕ್ತಾಯವಾಗಿದೆ. ತಮ್ಮ ಅಪೂರ್ವ ಒಳನೋಟಗಳಿಂದ ಓದುಗರ ಮನಗೆದ್ದ ಕಾಶಿ ಅವರು ಬಿಡುವು ಬಯಸಿದ್ದಾರೆ. ಹೀಗಾಗಿ ಸತತ ಎರಡು ವರ್ಷಗಳಿಂದ ಈ ಅಂಕಣದಲ್ಲಿ ಚಿತ್ರಕಲೆಯೊಂದಿಗೆ ಅವರು ನಡೆಸಿದ ಸಂವಾದಕ್ಕೂ ತೆರೆ ಬಿದ್ದಿದೆ.

**-ಸಂಪಾದಕ**